ಅಳವಡಿಸಬೇಕೆಂದು ಹೇಳಿದ್ದೇವೆ. ತಾವು ಹೇಳಿದ ಹಾಗೆ, ಬೆಂಗಳೂರಿನಲ್ಲಿ 30 ಲಕ್ಷ vehicles ಇವೆ. ಅವುಗಳನ್ನು ನಾವು control ಮಾಡಲಿಕ್ಕಾಗುತ್ತಿಲ್ಲ. ಅದಕ್ಕೋಸ್ಕರ ತಾವು ಹೇಳಿದ ಹಾಗೆ, CNG ಯನ್ನು ಅಳವಡಿಸಬೇಕು. ಇನ್ನು, ಮಾನ್ಯ ಶಾಸಕರು ಹೇಳಿದ ಹಾಗೆ, silencer ನಿಂದ ಕರ್ಕಶವಾದ ಶಬ್ದವೇನು ಬರುತ್ತದೆ, alteration silencer ಅನ್ನು ಅಳವಡಿಸುವ ಮೂಲಕ ಸರಿಪಡಿಸಬೇಕೆಂದು ಈಗಾಗಲೇ RTO ಇಲಾಖೆಯಿಂದ ಪತ್ರ ಬರೆದಿದ್ದಾರೆ. RTO ಇಲಾಖೆಯವರು ಅದರ ಬಗ್ಗೆ ಈಗಾಗಲೇ ಕಾರ್ಯೋನ್ಮುಖರಾಗಿ ಕೆಲಸ ಮಾಡುತ್ತಿದ್ದಾರೆ. ತಾವು ಹೇಳಿದ ಹಾಗೆ, ಅದನ್ನು ಸರಿಪಡಿಸಿ, ಕರ್ಕಶ ಶಬ್ದವನ್ನು ನಿಲ್ಲಿಸುವ ಕೆಲಸವನ್ನು RTO ಇಲಾಖೆ ಮಾಡುತ್ತದೆ.

ಮಾಜಿ ಪಟೇಲರಿಗೆ ಬಾಕಿಯಿರುವ ಗೌರವಧನವನ್ನು ನೀಡುವುದು

589. ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ): ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಮಾಜಿ ಪಟೇಲರಿಗೆ ಬಾಕಿ ಇರುವ ಗೌರವಧನವನ್ನು ನೀಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಾಕಿ ಇರುವ ಗೌರವಧನವನ್ನು ಯಾವಾಗ ನೀಡಲಾಗುವುದು;

(ಇ) ಈ ಬಗ್ಗೆ ಸರ್ಕಾರವು ಕೈಕೊಂಡ ಕ್ರಮವೇನು? (ವಿವರ ನೀಡುವುದು)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

(ಅ) ಬಂದಿದೆ

(ಆ) ಆರ್ಥಿಕ ಇಲಾಖೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. ಕಾನೂನು ಇಲಾಖೆಯ ಅಭಿಪ್ರಾಯ ಪಡೆದನಂತರ ಆರ್ಥಿಕ ಇಲಾಖೆಯ ಸಹಮತಿ ಪಡೆದು ತ್ವರಿತ ಕ್ರಮ ಕೈಗೊಳ್ಳಲಾಗುವುದು;

(ಇ) ಮೇಲಿನಂತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 87 (589)
(ಉತ್ತರದ ಪ್ರತಿಯನ್ನು ಲಗತ್ತಿಸಿದೆ)

ಶ್ರೀ ಗಂಗಾಧರ್ ನಾಗೇಶ್ ಭಟ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ (ಆ) ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ನನಗೆ ಇದರಲ್ಲಿ ಸರಿಯಾದ ಉತ್ತರ ಸಿಗಲಿಲ್ಲ. ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನಲ್ಲಿ 18 ಮಾಜಿ ಪಟೇಲರು ಹಾಗೂ ಜೋಯಿಡಾ ತಾಲ್ಲೂಕಿನಲ್ಲಿ 13 ಮಾಜಿ ಪಟೇಲರು ಇರುತ್ತಾರೆ. ಸದರಿಯವರಿಗೆ ದಿನಾಂಕ: 1.1.1994 ರಿಂದ 30.11.2000ದವರೆಗೆ ಬಾಕಿ ಇರುವ ಗೌರವ ಧನವನ್ನು ಬಟವಾಡೆ ಮಾಡಬೇಕಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 256 ಮಾಜಿ ಪಟೇಲರು ಇರುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಜಿ ಪಟೇಲರಿಗೆ ಪ್ರತಿ ತಿಂಗಳು ರೂ.500–00 ರಂತೆ ದಿನಾಂಕ: 1.1.1994 ರಿಂದ 30.11.2000ರವರೆಗೆ 1 ಕೋಟಿ 7 ಲಕ್ಷ 52 ಸಾವಿರ ರೂ.ಗಳ ಗೌರವ ಧನ ಮಂಜೂರು ಮಾಡುವುದು ಬಾಕಿ ಇದೆ. ಅದಕ್ಕಾಗಿ 75–80 ವರ್ಷ ವಯಸ್ಸಾದವರು ನಮ್ಮ ಕಡೆ ನಡೆದುಕೊಂಡು ಬರುತ್ತಾರೆ, ಅವರು ಇನ್ನೊಬ್ಬರ ಕೈಹಿಡಿದುಕೊಂಡು ಬರುತ್ತಾರೆ. ನಾವು ಸಾಯುವುದಕ್ಕೆ ಮುಂಚೆ ಆ ಗೌರವಧನ ನಮಗೆ ಸಿಗುತ್ತದೆಯೇ? ಎಂದು ಅವರು ಕೇಳುತ್ತಿದ್ದಾರೆ. ಅವರಿಗೆ ಕೊಡಬೇಕಾದ ಗೌರವ ಧನ ಆದಷ್ಟು ಬೇಗ ಅವರಿಗೆ ಸಿಗಬೇಕೆಂದು ನಾನು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ದಿ: 1.2.1963 ರಲ್ಲಿ ಜಾರಿಗೆ ಬಂದಂಥ 1963ರ ಕರ್ನಾಟಕ ಗ್ರಾಮಾಧಿಕಾರಿಗಳ ರದ್ಧತಿ ಕಾಯಿದೆ ಪರಿಣಾಮವಾಗಿ ಈ ಅನುವಂಶಿಕ ಅಧಿಕಾರವನ್ನು ಕಳೆದುಕೊಂಡಂಥ ಮಾಜಿ ಪಟೇಲರಿಗೆ ಈ ಗೌರವ ಧನವನ್ನು ಕೊಡುವಂಥದ್ದು ಮೊದಲು 100 ರೂ. ಇದ್ದುದ್ದನ್ನು ದಿ: 1.8.1984ರಿಂದ ಜಾರಿಗೆ ಬರುವಂತೆ ಸರ್ಕಾರ ಆದೇಶ ಮಾಡಿತ್ತು. ಮುಂದೆ, ಅದನ್ನು 500 ರೂ.ಗಳಿಗೆ ಹೆಚ್ಚಿಸಿದ್ದೇವೆ. ಆದರೆ, ದಿನಾಂಕ: 1.1.1994ರಿಂದ ಈ ಗೌರವ ಧನ ಕೊಟ್ಟಿಲ್ಲ. ಹೀಗಾಗಿ, ಈ ಗೌರವ ಧನದ ಬಾಕಿ ಕೊಡಬೇಕೆಂದು ಕಾರವಾರ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಮಾಜಿ ಪಟೇಲರು ಕೆಲವೇ ಕೆಲವರು ಉಳಿದಿದ್ದಾರೆ, ಅವರಿಗೆ ಗೌರವ ಧನ ಕೊಡಬೇಕೆಂಬ ಬೇಡಿಕೆಯನ್ನು ಅವರಿಟ್ಟಿದ್ದಾರೆ. ಈಗಾಗಲೇ ಅವರು High Court & Supreme Court ನಲ್ಲಿ ಕೇಸ್ ಫೈಲ್ ಮಾಡಿ ಈ ಒಂದು ಗೌರವಧನವನ್ನು ಕೊಡಬೇಕೆಂದು ಸರ್ಕಾರದ ಮೇಲೆ ಅಲ್ಲಿಂದ ಡೈರೆಕ್ಷನ್ ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಮ್ಮ ಕಂದಾಯ ಇಲಾಖೆ ಸಂಪೂರ್ಣವಾಗಿ ಸ್ಪಂದಿಸಿ, ಈ ಗೌರವಧನ ಕೊಡಬೇಕೆನ್ನುವುದರ ಬಗ್ಗೆ ನಮ್ಮ ಆರ್ಥಿಕ ಇಲಾಖೆಗೆ ಕಡತವನ್ನು ಕಳುಹಿಸಿದ್ದೇವೆ. ಕಾನೂನು ಇಲಾಖೆಯ ಒಪ್ಪಿಗೆಯನ್ನು

ತೆಗೆದುಕೊಂಡು, ಆರ್ಥಿಕ ಇಲಾಖೆಗೆ ಕಡತವನ್ನು ಮಂಡಿಸಿ ಎಂದು ಈಗಾಗಲೇ ಹೇಳಿದ್ದಾರೆ. ಹೀಗಾಗಿ ಇದಕ್ಕೆ ಕಂದಾಯ ಇಲಾಖೆಯೂ ಪೂರಕವಾಗಿ ಸ್ಪಂದಿಸಿದೆ. ಅದಷ್ಟು ಬೇಗನೆ ಈ ಗೌರವಧನವನ್ನು ಮಾಜಿ ಪಟೇಲರಿಗೆ ಬಿಡುಗಡೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: Supreme Court ನಲ್ಲಿ ಒಂದು decision ಆಗಿದೆ. Supreme Court ನಲ್ಲಿ ಶ್ಯಾನುಬೋಗರು ಮತ್ತು ಪಟೇಲ್‌ರು ಬೇರೆ ಬೇರೆ ಎಂದು ಕನ್ಸಿಡರ್ ಮಾಡಲಿಕ್ಕಾಗುವುದಿಲ್ಲ. ಶ್ಯಾನುಬೋಗಿರಿಗೆ ಯಾವತ್ತಿನಿಂದ ಗೌರವಧನ ಕೊಟ್ಟಿದ್ದಿರಿ ಆ ಡೇಟ್‌ನಿಂದ ಪಟೇಲರಿಗೂ ಕನ್ಸೀಡರ್ ಮಾಡಿ ಅರಿಯರ್ಸ್ ಪೇ ಮಾಡಬೇಕೆಂದು Supreme Court decision ಆಗಿದೆ ನಿಮಗೆ ಗೊತ್ತೇ? ಅದನ್ನು ಎನಾದರೂ implement ಮಾಡುತ್ತಿರಾ? Supreme Court decision ಆದರೂ ತಾವು ಏಕೆ ಮಾಡಿಲ್ಲ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ತಾವು Law deparment ಗೆ ಕಳುಹಿಸುತ್ತೇವೆಂದು ಹೇಳಿದಿರಿ. Supreme Court ನ ಆದೇಶವಾದ ಮೇಲೆ ಪುನ: ನೀವು Law department opinion ಏಕೆ ತೆಗೆದುಕೊಳ್ಳುತ್ತೀರೋ ಗೊತ್ತಾಗಲಿಲ್ಲ. ಶ್ಯಾನುಬೋಗರಿಗೆ ಕೊಟ್ಟಿದಿರಿ, ಪಟೇಲ್‌ರದು ಮಾತ್ರ ಬಾಕಿ ಇರುವುದು.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು: ಗೌರವಧನ ಕೊಡುವುದಾದರೆ ಬೇಗನೆ ಕೊಡಬೇಕು. ಏಕೆಂದರೆ, ಈಗಾಗಲೇ ಸಾಕಷ್ಟು ಜನರಿಗೆ ವಯಸ್ಸಾಗಿದೆ. ಪಟೇಲ್‌ರೆಲ್ಲರೂ ನಿವೃತ್ತಿಯಾಗುತ್ತಿದ್ದಾರೆ. ಎಲ್ಲಾ ವಯಸ್ಸಾಗಿ ತೀರಿಕೊಳ್ಳುತ್ತಿದ್ದಾರೆ. ಅವರು ಸಾಯುವುದರೊಳಗಾಗಿ ಅವರಿಗೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಏಕೆಂದರೆ, ಈ ರಾಜ್ಯಕ್ಕಾಗಿ ಪಟೇಲರು ಬಹಳಷ್ಟು ದುಡಿದಿದ್ದಾರೆ.

ಶ್ರೀ ಕೆ. ಶ್ರೀನಿವಾಸ ಗೌಡ: ಪಟೇಲ್‌ರು ಯಾವ ರೀತಿ ಇದ್ದಾರೆಂದು ಈಗಿನ ಪರಿಸ್ಥಿತಿಯಲ್ಲಿ ನೀವು ಹಳ್ಳಿಗಳಿಗೆ ಹೋಗಿ ನೋಡಿ. ನಾವೆಲ್ಲ ಪಟೇಲ್‌ರ ಕಾಲದಲ್ಲಿ ಇದ್ದವರು. ಪಟೇಲ್‌ರು ಇವತ್ತು ಕೂಲಿಗೆ ಹೋಗುವಂಥ ಪರಿಸ್ಥಿತಿ ಬಂದಿದೆ. ಅವರಿಗೆ ಕೊಡಬೇಕಾಗಿರುವ ಹಣಕ್ಕೆ ಇನ್ನು ನೀವು Law deparment ಗೆ ಕಳುಹಿಸುತ್ತೇವೆ, ಅಲ್ಲಿಂದ ಬಂದ ಮೇಲೆ ಮಾಡುತ್ತೇನೆಂದರೆ ಹೇಗೆ? ಈಗ ಮಾನ್ಯ ಮಾಧುಸ್ವಾಮಿಯವರು ಹೇಳಿದರು. Supreme Court ನಲ್ಲಿ ಶ್ಯಾನುಬೋಗರಿಗೆ ಏನು ಕೊಡಬೇಕೆಂದು ಆಗಿದೆ ಅವತ್ತಿನಿಂದ ಪಟೇಲ್‌ರಿಗೂ ಕೊಡಬೇಕೆಂದು ಹೇಳಿದ್ದಾರೆ. ಅದನ್ನು ಕೊಡಲಿಕ್ಕೆ ನಿಮಗೇನು ತೊಂದರೆ? ಅಥವಾ

ಬೊಕ್ಕಸದಲ್ಲಿ ಹಣ ಇಲ್ಲವೆ? Supreme Court ನ order ಅನ್ನು implement ಮಾಡುವುದಕ್ಕೆ ನಿಮಗೇನು ತೊಂದರೆ? ಎನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು: ಶ್ರೀನಿವಾಸ ಗೌಡರವರ ಸರ್ಕಾರ ಇತ್ತು ಆಗ ಇವರು ಏಕೆ ಇದರ ಬಗ್ಗೆ ಚಿಂತನೆ ಮಾಡಲಿಲ್ಲ? ಈಗ ಮಾತ್ರ ಬಹಳ ಚಿಂತನೆ ಮಾಡಿದಿರಿ, ಇದಕ್ಕೆ ಧನ್ಯವಾದಗಳು. ಸರ್ಕಾರ ಯಾವುದೇ ಇರಲಿ, ಆದರೆ, ಈ ರೀತಿಯಾಗಿ ತಮ್ಮ ಸರ್ಕಾರ ಇದ್ದಾಗ ಚಿಂತನೆ ಮಾಡಿದ್ದರೆ ಅನುಕೂಲವಾಗುತಿತ್ತು. ಏಕೆಂದರೆ, ನಮ್ಮ ಕ್ಷೇತ್ರದಲ್ಲಿ ಎಷ್ಟು ಜನ ಪಟೇಲ್‌ರುಗಳು ಸತ್ತು ಹೋಗಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಗೋಪಾಲಕೃಷ್ಣರವರೆ, ಏನೇ ಆಗಲಿ ಈ ಸರ್ಕಾರವೇ ಮಾಡಬೇಕಾಗಿದೆ. ಈ ಸರ್ಕಾರ ಬಂದಾಗಲೇ ಬಿಡುಗಡೆ ಮಾಡುವಂಥ ಪರಿಸ್ಥಿತಿ ಬಂದಿದೆ. ಈಗ Supreme Court ನ ಒಂದು ನಿರ್ಣಯವಾಗಿದೆ. ಅದನ್ನು ನಾವು obey ಮಾಡಲೇ ಬೇಕಾಗುತ್ತದೆ. ಇವು ಏನು ಕೆಲವು formalities ಇದೆ, ನಮ್ಮ ಕಂದಾಯ ಇಲಾಖೆಯಿಂದ ಅದನ್ನು clear ಮಾಡಿದ್ದೇವೆ. Supreme Court ನ ಆಜ್ಞೆ ಏನು ಕೊಡಬೇಕೆಂದು ಇದೆ, ಅದರ ಪ್ರಕಾರ ನಾವು ನಡೆದುಕೊಳ್ಳಬೇಕೆಂದು clear cut ಆಗಿ ಹೇಳಿದ್ದೇವೆ. ಇದು ಒಟ್ಟಾಗಿ 10 ಕೋಟಿ 84 ಲಕ್ಷ ರೂಪಾಯಿ ಆಗುತ್ತದೆ. ಇಲ್ಲಿಯವರಿಗೇನು ಮಾಜಿ ಪಟೇಲ್‌ರಿಗೆ ಗೌರವಧನ ಕೊಡುವುದು ಬಾಕಿ ಇದೆ, 10 ಕೋಟಿ 84 ಲಕ್ಷ ವಾಗುತ್ತದೆ. ಹೀಗಾಗಿ ಆರ್ಥಿಕ ಇಲಾಖೆಯ ಸಹಮತವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಆ ಒಂದು formalities ನಾವು ಮಾಡಬೇಕಾಗಿದೆ. ಆ ದೃಷ್ಟಿಕೋನದಿಂದ ಆರ್ಥಿಕ ಇಲಾಖೆಗೆ ಕಳುಹಿಸುವ ಸಂದರ್ಭದಲ್ಲಿ ಅವರು ಕಾನೂನು ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಂಡು ಮಂಡಿಸಿ ಎಂದು ಹೇಳಿರುವುದರಿಂದ, ಅದಕ್ಕಾಗಿ just it is formalities, ಅದಷ್ಟು ಬೇಗನೆ ಈ ಒಂದು ಗೌರವಧನವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

158. ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2006–07ನೇ ಸಾಲಿನಲ್ಲಿ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಜಮೀನು ಮತ್ತು ನಿವೇಶನಗಳ ಬೆಲೆಯು 3 ರಿಂದ 6 ಪಟ್ಟು ಹೆಚ್ಚಾಗಿರುವುದು ಹಾಗೂ ಖರೀದಿಯೂ ಸಹ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;